(ಳ) ನೌಕರರಿಗೆ ಉತ್ತೇಜಕ ಯೋಜನೆಯನ್ನು ಪ್ರಾರಂಭಿಸುವುದು.

(ಙ) ಆಧುನಿಕ ತಾಂತ್ರಿಕ ಶಿಕ್ಷಣ ಕೆಲಸದಲ್ಲಿ ಉತ್ತಮ ಕುಶಲತೆಗಳೊಡನೆ ವಾಹನಗಳ ನಿರ್ವಹಣೆಯನ್ನು ನಿರ್ವಹಿಸುವುದು.

ನಂಜನಗೂಡು ಟೌನಿನಲ್ಲಿ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಸ್ಥಾಪನೆ ಮಾಡುವ ಬಗ್ಗೆ

೧೨೪೮ ಶ್ರೀ ಎಂ. ಮಹದೇವ್ (ನಂಜನಗೂಡು) ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂಜನಗೂಡು ಟೌನಿನಲ್ಲಿ ಹಲವಾರು ಕೈಗಾರಿಕೆಗಳು ಪ್ರಾರಂಭವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಅಲ್ಲಿ ಕಾರ್ಮಿಕರಿಗೆ ವಸತಿ ಗೃಹಗಳ ಸೌಲಭ್ಯ ಸರಿಯಾಗಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಅಲ್ಲಿ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಸ್ಥಾಪನೆ ಮಾಡಲು ಸರಕಾರದವರೆ ಉದ್ದೇಶಿಸಿದ್ದಾರೆಯೇ ?

ಶ್ರೀ ಅಜೀಜ್ ಸೇಟ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು.)—

ಅ) ಹೌದು.

ಆ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ನಿರ್ದಿಷ್ಟವಾದ ದೂರುಗಳು ಬಂದಿಲ್ಲ. ಕಾರ್ಖಾನೆಗಳ ಕಾಯಿದೆ ೧೯೪೮ರ ಪ್ರಕಾರ ಕಾರ್ಖಾನೆಗಳು. ಉದ್ದಿಮೆಗಳು ಕಡ್ಡಾಯವಾಗಿ ತಮ್ಮ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಒದಗಿಸಲೇ ಬೇಕೆಂಬ ನಿಯಮವಿಲ್ಲ. ಆದರೂ ಕೆಲವು ಕೈಗಾರಿಕಾ ಸಂಸ್ಥೆಗಳು ತಮ್ಮದೇ ಆದ ವಸತಿ ಸೌಕರ್ಯ ಯೋಜನೆಗಳನ್ನು ಹೊಂದಿವೆ.

ಇ) ಸುಜಾತಾ ಟೆಕ್ಸ್‌ಟಾಯಿಲ್ಸ್ ಮಿಲ್ಸ್ ರವರು ತಮ್ಮ ಸಂಸ್ಥೆಯ ಆವರಣದಲ್ಲಿ ಒಂದು ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಮಾಡಿಕೊಂಡಿರುವ ಮನವಿಯು ಕರ್ನಾಟಕ ರಾಜ್ಯದ ಕನಿಷ್ಠ ವೇತನ ಮಂಡಳಿಯ ತೀವ್ರ ಪರಿಶೀಲನೆಯಲ್ಲಿದೆ.

ಮಂಗಳೂರಿನಲ್ಲಿ ದೂರದರ್ಶನ ಪ್ರಸಾರ ಕೇಂದ್ರ

೧೩೨೨ ಶ್ರೀ ಎ. ಧನಂಜಯಕುಮಾರ್ (ಮಂಗಳೂರು) ಮಾನ್ಯ ಪ್ರಚಾರ ವಾರ್ತಾ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ದೂರದರ್ಶನ ಪ್ರಸಾರ ಕೇಂದ್ರಕ್ಕೆ ನಿವೇಶನವನ್ನು ಆಯ್ಕೆ ಮಾಡಲಾಗಿದೆಯೇ ?

ಆ) ಸದರಿ ಈ ಪ್ರಸಾರ ಕ್ಷೇತ್ರದ ವಿಸ್ತಾರ ಎಷ್ಟು ? ಯಾವ ಶಕ್ತಿಯ ಯಂತ್ರವನ್ನು ಪ್ರಸಾರ ಕೇಂದ್ರದಲ್ಲಿ ಅಳವಡಿಸಲಾಗಿದೆಯೇ ?

ಇ) ಈ ಸದರಿ ಕ್ಷೇತ್ರದಿಂದ ಪ್ರಸಾರ ಕೇಂದ್ರವನ್ನು ಯಾವ ದಿನಾಂಕದಿಂದ ಪ್ರಾರಂಭಿಸ ಲಾಗುವುದು ?

ಶ್ರೀ ಎಂ. ರಘುಪತಿ (ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—

ಅ) ಹೌದು.

ಆ. ಕಡಿಮೆ ಶಕ್ತಿಯ ಟ್ರಾನ್ಸ್‌ಮೀಟರನ್ನು ಸ್ಥಾಪಿಸಲಾಗುವುದು. ಇದರ ಪ್ರಸಾರ ವ್ಯಾಪ್ತಿ ಸುಮಾರು ೧೫ ಕಿ.ಮೀ. ವರೆಗೂ ಇರುತ್ತದೆ. ಆದರೆ ಗುಡ್ಡಗಾಡು ಪ್ರದೇಶದಲ್ಲಿ ವ್ಯಾಪ್ತಿ ಇನ್ನು ಕಡಿಮೆ ಆಗಬಹುದೆಂದು ತಿಳಿದು ಬಂದಿದೆ.